ಕಾಲ ಸುದೀರ್ಘವಾದ ವಾದ ವಿವಾದಗಳಲ್ಲಿ ತೊಡಗಿದ್ದರು. ಯಾಕೆ ಅಮ್ಮ ಅಪ್ಪನೊಡನೆ ಜಗಳ ಕಾದುದು? ನಾನು ನಿರೀಕ್ಷಿಸಿದಂತೆ ಮನೆಯೊಳಗಿನ ವಾತಾವರಣ ಸುಖಕರವಾಗಿರಲಿಲ್ಲ. ಗುಸು ಗುಸುಗಳು ಅಲ್ಲಲ್ಲಿ ಮೇಲೆದ್ದು ಬರುತ್ತಿವೆ. ಅದನ್ನೆಲ್ಲ ಅಮ್ಮ ಕೇಳಿಸಿಕೊಳ್ಳಬಾರದೆಂದು ಎಲ್ಲರಿಗೂ ಇದೆ. ಸಮಸ್ಯೆ ಪೂರ್ತಿ ನಾನು ತಿಳಿದ ಮಟ್ಟಿಗೆ ಆ ಹುಡುಗಿಯೇ. ನೆರೆಮನೆಯ ಪಾರುವಮ್ಮನಲ್ಲಿ ಚಿಕ್ಕಮ್ಮ ಮೆಲುದನಿಯಲ್ಲಿ ಹೇಳುತ್ತಿದ್ದರು, 'ನೋಡಿದರೆ ಗೊತ್ತಾಗೋದಿಲ್ವೇ?' 'ಮತ್ತಲ್ಲದೇ?' 'ಅಕ್ಕ ಕೇಳಿಸಿಕೊಳ್ಳುವುದು ಬೇಡ, ಇದಂತೆ ದೊಡ್ಡ ಮಗಳು...' ವಿಷಯ ಹೆಚ್ಚು ಕಡಿಮೆ ನನಗೆ ಅರ್ಥವಾಯಿತು. ಮನೆಯ ಮೂಲೆ ಮೂಲೆಗಳಲ್ಲಿ ಕೇಳಿಸುತ್ತಿದ್ದ ವಿಷಯ ಒಂದೇ; ಲೀಲಾ ಅಪ್ಪನ ಮಗಳು! ಅಪ್ಪನ ಮಗಳು! ಆಗ ನನಗೆ ತಂಗಿ. ನಾನು ಇದುವರೆಗೆ ತಿಳಿದುಕೊಂಡಿದ್ದು ತಪ್ಪು. ನನಗೂ ಒಬ್ಬಳು ತಂಗಿಯಿದ್ದಾಳೆ. ಇದು ಒಳ್ಳೆಯ ವಿಷಯ ಎಂಬುದು ನನ್ನ ನಂಬಿಕೆ. ಆದರೂ ಇವರೆಲ್ಲ ಹುಬ್ಬು ಗಂಟಿಕ್ಕುವುದ್ಯಾಕೆ?

ಅವಳು ಹೇಳುವುದು ನನಗೆ ತಿಳಿಯುತ್ತಿಲ್ಲ. ಮತ್ತೆ ಆ ದಿಟ್ಟ ನೋಟ. ಆದರೂ ನನಗದಕ್ಕೆ ವಿರೋಧವಿಲ್ಲ. ಅವಳು ನನ್ನ ತಂಗಿಯಲ್ಲವೇ? ಅವಳು ನನ್ನ ತಂಗಿಯೋ, ಅಕ್ಕನೋ! ಹೇಳುವುದು ಕಷ್ಟ. ಅಪ್ಪನಲ್ಲಿ ಕೇಳಿದರೆ ಗೊತ್ತಾದೀತು. ಆದರೆ, ಕೇಳುವುದು ಸಾಧ್ಯವಿಲ್ಲ. ತಂಗಿಯಾಗಿರುವ ಸಾಧ್ಯತೆಯೇ ಹೆಚ್ಚು. ನನ್ನ ಭಾಷೆ ಅವಳಿಗೆ ಅರ್ಥವಾದರೆ ಮತ್ತೆ ನಾನು ತಂಗಿ ಎಂದೇ ಕರೆಯುತ್ತೇನೆ. ತಂಗಿಯೊಡನೆ ಹತ್ತಿರವಾಗಲು ಶ್ರಮಿಸಿದರೂ ಅದು ಫಲಿಸಲಿಲ್ಲ. ಅವಳು ನಮ್ಮಿಂದೆಲ್ಲ ದೂರ ನಿಲ್ಲುತ್ತಿದ್ದಳು. ಅಪ್ಪನಲ್ಲಿ ಮಾತ್ರವೇ ಮಾತನಾಡುತ್ತಿದ್ದಳು. ಯಾವಾಗಲೂ ಅವಳಿಗೆ 'ಡ್ಯಾಡಿ' ಸಾಕು. 'ಡ್ಯಾಡಿ' ಎಂದರೆ ಅಪ್ಪ ಎಂದರ್ಥ ಎಂದು ದೊಡ್ಡಣ್ಣ ಹೇಳಿದ್ದ. ದೊಡ್ಡಣ್ಣನಿಗೆ ಇಂಗ್ಲಿಷ್ ಗೊತ್ತಿದೆ.

ಹಗಲು ಪೂರ್ತಿ ಅವಳು ಆ ಚರ್ಮದ ಪೆಟ್ಟಿಗೆಯ ಬಳಿಯಲ್ಲಿ ಕಳೆಯುವಳು. ಬೀಗದ ಕೈಗಳನ್ನು ಯಾವಾಗಲೂ ತೋರು ಬೆರಳಿಗೆ ಸಿಕ್ಕಿಸಿಕೊಂಡು ತಿರುವುತ್ತಿದ್ದಳು. ಪೆಟ್ಟಿಗೆಯ ಸಮೀಪಕ್ಕೆ ಯಾರಾದರೂ ಹೋದರೆ ಈದ ಹಾವಿನಂತೆ ಅವಳು ಸೆಟೆದು ನಿಲ್ಲುತ್ತಿದ್ದಳು. ಆ ಪೆಟ್ಟಿಗೆ ತುಂಬ ಉಡುಪುಗಳು. ಸುಂದರ ಬಟ್ಟೆಗಳಿಂದ ತಯಾರಿಸಿದ ಉಡುಪುಗಳು. ತೆರೆದರೆ 'ನ್ಯಾಫ್ತಲಿನ್' ಮಾತ್ರೆಗಳ ಪರಿಮಳವಿರುತ್ತಿತ್ತು. ಹಿತಕರವಾದ ಬೇರೊಂದು ಪರಿಮಳವೂ ಇರುತ್ತಿತ್ತು.ಎರಡು ದಿನಗಳ ಬಳಿಕ ಆ ರಬ್ಬರ್ ಗೂಬೆಯನ್ನು ಕಂಡೆ. ಅವಳು ಪೆಟ್ಟಿಗೆ ತೆರೆದಾಗ ನಾನು ಹಿಂದಿನಿಂದ ಮೆಲ್ಲನೆ ಇಣುಕಿ ನೋಡಿದೆ. ಆಗ ಕಾಣಿಸಿದ್ದು; ಉಡುಪುಗಳ ನಡುವೆ ಸುಂದರವಾದ ರಬ್ಬರ್ ಗೂಬೆ. 'ಅದೇನು?' ಕುತೂಹಲ ತಣಿಯಲಿಲ್ಲ. ಅವಳು ಕಣ್ಣರಳಿಸಿ ತಾತ್ಸಾರ ಭಾವದಿಂದ ನನ್ನನ್ನು ನೋಡಿದಳು.ನಾನು ಹೇಳಿದ್ದು ಅರ್ಥವಾಗಿದ್ದಿರಲಾರದು. 'ಅದುವೇ... ಆ.... ಕಾಣಿಸುವುದು?' ನಾನು ಬೆಟ್ಟುಮಾಡಿ ತೋರಿಸಿದೆ. ಅವಳು ರಬ್ಬರ್ ಗೂಬೆಯನ್ನು ಹೊರಗೆ ತೆಗೆದಳು. ಅದರ ಸೌಂದರ್ಯವನ್ನು ಸ್ವತಃ ಒಮ್ಮೆ ಆಸ್ವಾದಿಸಿದ ಬಳಿಕ ನನ್ನನ್ನೊಮ್ಮೆ ನೋಡಿದಳು. ಅವಳ ಕಿರುಬೆರಳು ಅದರ ಹಿಂದಿನಿಂದ ಚಲಿಸಿತು. ಗೂಬೆಯ ನೀಲ ಕಣ್ಣುಗಳು ಹೊಳೆಯುತ್ತಿದ್ದವು! 'ಒಮ್ಮೆ ನೋಡೋಣ...' ನಾನು ನಾಚಿಕೆಯಿಂದ ಹೇಳಿದೆ. ಯಾರಾದರೂ ಕೇಳಿಸಿಕೊಂಡರೆ ತಮಾಷೆ ಮಾಡುತ್ತಾರೋ ಎಂಬ ಭಯ. ಮತ್ತೆ ಅವಳು ನನ್ನನ್ನು ತಾತ್ಸಾರ ಭಾವದಿಂದ ನೋಡಿದಳು. ಬಳಿಕ ಮೆಲ್ಲನೆ ಆ ರಬ್ಬರ್ ಗೂಬೆಯನ್ನು ಪೆಟ್ಟಿಗೆಯೊಳಗಿರಿಸಿ ಭದ್ರವಾಗಿ ಬೀಗ ಜಡಿದಳು. ನನಗೆ ನಿರಾಸೆಯಾಯಿತು. ನನ್ನ ಅಪ್ಪನ ಮಗಳಾದರೂ ಅವಳು ಜಂಭದ ಕೋಳಿ ನಿಶ್ಚಯ. ನನಗೆ ರಬ್ಬರ್ ಗೂಬೆಯ ಮೇಲೆ ಮನಸ್ಸಾಗಿದೆ ಎಂಬುದನ್ನು ಅವಳು ಕಂಡುಕೊಂಡಿರಬೇಕು. ಇಲ್ಲವಾದರೆ ಆಗಾಗ ಪೆಟ್ಟಿಗೆ ತೆರೆದು ಅದನ್ನು ಹೊರಗೆ ತೋರಿಸಿಕೊಂಡು ನನಗೆ ಆಸೆ ಹುಟ್ಟಿಸುವುದ್ಯಾತಕ್ಕೆ? ಅವಳ ಬಗೆಗೆ ನನಗೇನೂ ತಿಳಿಯಬೇಕಾಗಿಲ್ಲ. ಅಪ್ಪನಲ್ಲಿ ಹೇಳಿದರೆ ಅಂತಹುದೇ ಒಂದನ್ನು ನನಗೆ ತೆಗೆದುಕೊಡದೇ ಇರಲಾರರು. ಒಮ್ಮೆ ಸಿಕ್ಕಿದ್ದರೆ ಕ್ಲಾಸಿಗೆ ತೆಗೆದುಕೊಂಡು ಹೋಗಿ ಸಹಪಾಠಿಗಳ ಎದುರು ಕಣ್ಣುಗಳನ್ನು ಹೊರಳಿಸಬಹುದು. ಹೊಟ್ಟೆಯನ್ನು ತೆರೆಯಬಹುದು. ಅಪ್ಪನಲ್ಲಿ ಹೇಳಿದರೋ? ಅಪ್ಪನ ಬಳಿಗೆ ಹೋಗುವುದು ನನಗೆ